ಇಲಾಖಾ ಸಮಗ್ರ ಪುನರ್ ರಚನೆ

4 (52)

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸಮಗ್ರ ಪುನರ್ ರಚನೆಯನ್ನು ಯಾವಾಗ ಮಾಡಲಾಗುವುದು?

ಆ) 2010–11 ನೇ ಸಾಲಿನಲ್ಲಿ ಕೃಷಿ ಆಯವ್ಯಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸಮಗ್ರ ಪುನರ್ ರಚನೆ ಸಲುವಾಗಿ ನಿಗಧಿಪಡಿಸಲಾದ ಅನುದಾನವೆಷ್ಟು; ಅದರ ಸದ್ಬಳಕೆಯಾಗದಿರಲು ಕಾರಣ–ವೇನು?

ಇ) ಸೇವಾ ಧೋರಣೆಯುಳ್ಳ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸಮಗ್ರ ಪುನರ್ ರಚನೆಯ ಮೊದಲನೇ ಹಂತದಲ್ಲಿ ಆಯುಕ್ತರ ಹಾಗೂ ಇಬ್ಬರು ಅಪರ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿದ್ದು, ಪೂರ್ಣವಾಗಿ ಪುನರ್‌ರಚನೆಯನ್ನು 8 ವರ್ಷಗಳಾದರೂ ಮಾಡದಿರಲು ಕಾರಣವೇನು?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

ಅ) ಇಲಾಖಾ ಪುನರ್‌ರಚನೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 2010–11 ನೇ ಸಾಲಿನಲ್ಲಿ ಇಲಾಖಾ ಪುನರ್‌ರಚನೆಗಾಗಿ ಅನುದಾನ ನಿಗಧಿಯಾಗಿರುವುದಿಲ್ಲ.

ಇ) ಪ್ರಸ್ತಾವನೆಯನ್ನು ಸಚಿವ ಸಂಪುಟದಲ್ಲಿ ಮಂಡಿಸಲಾಗಿತ್ತು. ಇನ್ನೂ ಪರಿಶೀಲನೆಯಲ್ಲಿದೆ.